8

ಮಯ್ಯಿತ್ ಪರಿಪಾಲನೆ



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಇಸ್ಲಾಂ ಒಂದು ಪರಿಪೂರ್ಣ ಧರ್ಮ. ಮನುಷ್ಯ ಜೀವನದ ವಿವಿಧ ಹಂತಗಳಲ್ಲಿ ಪಾಲಿಸಬೇಕಾದ ಎಲ್ಲಾ ನಿಯಮಗಳನ್ನು ನಮಗೆ ಅದರಲ್ಲಿ ಕಂಡುಕೊಳ್ಳ-ಬಹುದು. ಮುಸ್ಲಿಮನಾದ ಒಬ್ಬ ವ್ಯಕ್ತಿ ಮರಣಹೊಂದಿ-ದರೆ ಜೀವಂತವಿರುವ ಇತರ ಮುಸ್ಲಿಂ ಸಹೋದರರಿಗೆ ಮೃತ ವ್ಯಕ್ತಿಯ ಮೇಲೆ ಕೆಲವು ಭಾಧ್ಯತೆಗಳನ್ನು ಇಸ್ಲಾಂ ಕಲ್ಪಿಸಿಕೊಡುತ್ತದೆ. ಅದು ಮೃತದೇಹದ ಪರಿಪಾಲ-ನೆ ಅಥವಾ ಮಯ್ಯಿತ್ ಪರಿಪಾಲನೆ ಎಂಬ ಹೆಸರಿನಲ್ಲಿ ಅರಿಯಲ್ಪಡುತ್ತದೆ.

ನಿರೀಶ್ವರವಾದಿಗಳು ಕೂಡ ಕಣ್ಣು ಮುಚ್ಚಿ ಅಂಗೀಕರಿಸುವ ಒಂದು ಸತ್ಯವಾಗಿದೆ ಮರಣ. ಮರಣದ ಉರುಳಿನಿಂದ ರಕ್ಷೆ ಹೊಂದಲು ಯಾರಿಗೂ ಸಾಧ್ಯವಿಲ್ಲ. ಅಲ್ಲಾಹು ತನ್ನ ದೌತ್ಯ ನಿರ್ವಹಣೆಗಾಗಿ ಆರಿಸಿಕೊಂಡ ಪ್ರವಾದಿ-ಗಳಿಗೆ ಕೂಡ ಮರಣದಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ-ವೆಂದ ಮೇಲೆ ಇತರ ಮನುಷ್ಯರಿಗೆ ಅದು ಅಸಾಧ್ಯವಾದ

ಮಾತೇ ಆಗಿದೆ.

“ಜನಿಸಿ ಬಂದ ಪ್ರತಿಯೊಂದು ಜೀವಿಯೂ ಮರಣದ ರುಚಿ ಆಸ್ವಾದಿಸಲೇಬೇಕು.” (ಕುರ್‌ಆನ್ 3:185)

ಆದ್ದರಿಂದ ಮರಣ ಹೊಂದುವ ಮೊದಲು ಮೃತ ಶರೀರದ ಪರಿಪಾಲನೆಯ ಕುರಿತು ಕಲಿಯಬೇಕಾದುದು ಪ್ರತಿಯೊಬ್ಬರ ಬಾಧ್ಯತೆಯಾಗಿದೆ. ಅದರ ಒಂದೊಂದು ಕರ್ಮಗಳೂ ಇಸ್ಲಾಮಿನ ಪ್ರಮಾಣಗಳಾದ ಕುರ್‌ಆನ್ ಮತ್ತು ಹದೀಸಿನ ಮಾರ್ಗದರ್ಶನಕ್ಕೆ ಅನುಸಾರವಾಗಿ ಇರಬೇಕಾಗಿದೆ. ಈ ಲೇಖನದಲ್ಲಿ ಅದಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಉಲ್ಲೇಖಿಸ ಬಯಸುತ್ತೇವೆ.

ಒಬ್ಬನು ರೋಗ ಪೀಡಿತನಾದರೆ ಅವನನ್ನು ಸಂದರ್ಶಿಸು-ವುದು ಪ್ರವಾದಿಚರ್ಯೆ (ಸುನ್ನತ್) ಆಗಿದೆ. ಅದಕ್ಕೆ ಬಹಳ ಶ್ರೇಷ್ಠತೆ ಇದೆ. ಒಬ್ಬ ಮುಸಲ್ಮಾನನಿಗೆ ಇನ್ನೊಬ್ಬ ಮುಸ-ಲ್ಮಾನನ ಮೇಲೆ ಇರುವ ಹಕ್ಕು ಬಾಧ್ಯತೆಗಳನ್ನು ವಿವರಿ-

ಸುವ ಹದೀಸಿನಲ್ಲಿ ಪ್ರವಾದಿ(ﷺ) ಹೇಳುತ್ತಾರೆ. “ಒಬ್ಬನು ರೋಗಪೀಡಿತನಾದರೆ ಅವನನ್ನು ಸಂದರ್ಶಿಸಿರಿ ಮತ್ತು ಅವನು ಮರಣಹೊಂದಿದರೆ ಅವನನ್ನು ಹಿಂಬಾಲಿಸಿರಿ.” (ಮುತ್ತಫಕುನ್ ಅಲೈಹಿ)

ಇಮಾಮ್ ಮುಸ್ಲಿಂ ಉಲ್ಲೇಖಿಸಿರುವ ಒಂದು ಹದೀಸಿನ-ಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ. “ಒಬ್ಬ ಮುಸ್ಲಿಂ ರೋಗಪೀಡಿತನಾದ ಇನ್ನೊಬ್ಬ ಮುಸ್ಲಿಮನನ್ನು ಸಂದ-ರ್ಶಿಸಲು ಹೊರಟರೆ ಅವನು ಮರಳುವ ತನಕ ಅವನು ಸ್ವರ್ಗದ ಸುವಾಸನೆಯನ್ನು ಆಸ್ವಾದಿಸುತ್ತಿರುತ್ತಾನೆ.”

ಪ್ರಭಾತದಲ್ಲಿ ಯಾರಾದರೂ ರೋಗಿಯನ್ನು ಸಂದರ್ಶಿ-ಸಿದರೆ ಪ್ರದೋಷದವರೆಗೆ ದೇವಚರರು ಅವನಿಗಾಗಿ ಪ್ರಾರ್ಥಿಸುತ್ತಾರೆ. ಅದೇ ಪ್ರಕಾರ ಸೂರ್ಯಾಸ್ತದ ಸಮ-ಯದಲ್ಲಿ ಯಾರಾದರೂ ರೋಗಿಯನ್ನು ಸಂದರ್ಶಿಸಿ-ದರೆ ಸೂರ್ಯೋದಯದವರೆಗೆ ದೇವಚರರು ಅವನ ಶಾಂತಿಗಾಗಿ ಪ್ರಾರ್ಥಿಸುತ್ತಾರೆಂಬ ವಚನ ತಿರ್ಮುದಿಯ-

ಲ್ಲಿದೆ. ಒಬ್ಬನು ರೋಗಪೀಡಿತನಾದರೆ ಅವನು ಅಲ್ಲಾಹನ ಮೇಲೆ ತನ್ನ ಭಾರವನ್ನು ಅರ್ಪಿಸುವುದರೊಂದಿಗೆ ರೋಗ ಚಿಕಿತ್ಸೆ ಮಾಡಬೇಕಾಗಿದೆ. ಆದರೆ ಚಿಕಿತ್ಸೆಗೆ ನಿಷಿದ್ಧವಾದ ರೀತಿ-ನೀತಿಗಳನ್ನು ಅವಲಂಬಿಸಬಾರದು. ಅಲ್ಲಾಹನ ಸಂದೇಶವಾಹಕರು(ﷺ) ಹೇಳುತ್ತಾರೆ. "ನಿಷಿದ್ಧವಾದ-ವುಗಳಿಂದ ನೀವು ಚಿಕಿತ್ಸೆ ಪಡೆಯಬಾರದು." (ಅಬೂ-ದಾವೂದ್)

ತನಗೆ ಬಾಧಿಸಿದ ರೋಗವು ಒಂದು ಪರೀಕ್ಷೆ ಎಂದು ತಿಳಿದು ಚಿಕಿತ್ಸೆ ಪಡೆಯುವುದರೊಂದಿಗೆ ಸಹನೆ–ಸಂಯಮ ಪಾಲಿಸಬೇಕಾಗಿದೆ. ಏಕೆಂದರೆ ಸತ್ಯವಿಶ್ವಾ-ಸಿಯ ಕಾಲಿಗೆ ಒಂದು ಮುಳ್ಳು ಚುಚ್ಚಿದರೂ ಕೂಡ ಆ ಮೂಲಕ ಅಲ್ಲಾಹು ಅವನ ಪಾಪಗಳನ್ನು ಕ್ಷಮಿಸು-ತ್ತಾನೆಂದು ಪ್ರವಾದಿ(ﷺ) ಯವರು ಹೇಳಿದ್ದಾರೆ. ಒಬ್ಬ ಮುಸ್ಲಿಂ ಮರಣ ಹೊಂದಿದರೆ ಅವನ ಮೃತ ಶರೀರವ-ನ್ನು ಸ್ನಾನ ಮಾಡಿಸುವುದು, ಅವನಿಗೆ ನಮಾಝ್ ನಿರ್ವ-

ಹಿಸುವುದು, ಅವನನ್ನು ಕಬ್ರ್‌ನ ಬಳಿಗೆ ಕೊಂಡೊಯ್ದು ಕಿಬ್ಲಾಭಿಮುಖವಾಗಿ ದಫನ ಮಾಡುವುದು ಇತರ ಮುಸ್ಲಿಮರ ಬಾಧ್ಯತೆಯಾಗಿದೆ.

ಮೃತ ಶರೀರಕ್ಕೆ (ಮಯ್ಯಿತ್) ಸ್ನಾನ ಮಾಡಿಸುವುದರ ಶ್ರೇಷ್ಠತೆ

ಅಬೂ ರಾಫಿಅ್(ﷺ) ವರದಿ ಮಾಡಿರುವ ಹದೀಸೊಂದರಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ. “ಯಾರಾದರೂ ಒಂದು ಮಯ್ಯಿತ್ತನ್ನು ಸ್ನಾನ ಮಾಡಿಸಿ ಅದರ ನ್ಯೂನತೆಗಳನ್ನು ಬಹಿರಂಗಪಡಿಸದೇ ಇದ್ದರೆ ಅವನ ನಲವತ್ತು ಹಿರಿಯ ಪಾಪಗಳನ್ನು ಅಲ್ಲಾಹು ಕ್ಷಮಿಸುತ್ತಾನೆ.” (ತಬ್ರಾನಿ ತನ್ನ ಕಬೀರ್‌ನಲ್ಲಿ ಉಲ್ಲೇಖಿಸಿದ ಈ ಹದೀಸನ್ನು ಹಾಕಿಮ್ ಸಹೀಹ್ ಎಂದಿದ್ದಾರೆ)

ಮೃತಶರೀರಕ್ಕೆ ಸ್ನಾನ ಮಾಡಿಸುವ ಕ್ರಮ

ಒಬ್ಬ ಮುಸ್ಲಿಮನು ಮರಣಹೊಂದಿದರೆ ಅವನ ಮೃತ

ಶರೀರವನ್ನು ಸ್ನಾನ ಮಾಡಿಸುವುದು ಮತ್ತು ಕಫನ್ ತೊಡಿಸುವುದು ಮುಸ್ಲಿಂ ಸಹೋದರರ ಬಾಧ್ಯತೆಯಾಗಿದೆ. ಈ ಕಾರ್ಯವನ್ನು ಸಮೂಹದಲ್ಲಿ ಯಾರಾದರೂ ಒಬ್ಬರು ನಿರ್ವಹಿಸಿದರೆ ಸಮೂಹದ ಬಾಧ್ಯತೆಯು ನೆರವೇರಿತು. ಮಯ್ಯಿತ್‌ಗೆ ಸ್ನಾನ ಮಾಡಿಸುವವರು ಮುಸ್ಲಿಮರಾಗಿರಬೇಕು, ವಿಶ್ವಸ್ಥರಾಗಿರಬೇಕು ಮತ್ತು ಮಯ್ಯಿತ್‌ಗೆ ಸ್ನಾನ ಮಾಡಿಸುವ ವಿಷಯದಲ್ಲಿ ಮಾಹಿತಿ ಇರುವವರಾಗಿರಬೇಕು. ಪುರುಷರನ್ನು ಪುರುಷರು ಮತ್ತು ಸ್ತ್ರೀಯರನ್ನು ಸ್ತ್ರೀಯರು ಸ್ನಾನ ಮಾಡಿಸತಕ್ಕದ್ದು. ಆದರೆ ಪತಿ ಪತ್ನಿಯನ್ನು ಮತ್ತು ಪತ್ನಿ ಪತಿಯನ್ನು ಸ್ನಾನ ಮಾಡಿಸಬಹುದು. ಏಳು ವರ್ಷಕ್ಕಿಂತ ಸಣ್ಣ ವಯಸ್ಸಿನ ಮಕ್ಕಳ ಮೃತದೇಹವಾಗಿದ್ದರೆ ಸ್ತ್ರೀಯರು ಪುರುಷರು ಯಾರು ಬೇಕಾದರೂ ಸ್ನಾನ ಮಾಡಿಸಬಹುದು. ಶುದ್ಧವಿರುವ ಅನುವದನೀಯವಾದ ನೀರಿನಿಂದ ಮರೆ ಇರುವ ಸ್ಥಳದಲ್ಲೇ ಸ್ನಾನ ಮಾಡಿಸಬೇಕು. ಕಾಲಿನ ಮಂಡಿ ಮತ್ತು ಹೊಕ್ಕುಳಿನ ನಡುವಿನ ಸ್ಥ-

ಳವನ್ನು ಹೊರತುಪಡಿಸಿ ಉಳಿದ ಸ್ಥಳದಿಂದ ವಸ್ತ್ರವನ್ನು ತೆಗೆದು ಹಾಕಿ ಸ್ನಾನ ಮಾಡಿಸಬೇಕು. ಮೃತದೇಹವನ್ನು ಕೂರಿಸುವ ರೂಪದಲ್ಲಿ ತಲೆಯ ಭಾಗವನ್ನು ಸ್ವಲ್ಪ ಎತ್ತಿ ಹಿಡಿದ ನಂತರ ಅದರ ಹೊಟ್ಟೆಯ ಮೇಲೆ ಹಗುರವಾಗಿ ಅದುಮಿಕೊಂಡು ಮಾಲಿನ್ಯವನ್ನು ನಿವಾರಿಸಬೇಕು. ಈ ಸಮಯದಲ್ಲಿ ಸಾಕಷ್ಟು ನೀರನ್ನು ಹಾಕಿ ಮಾಲಿನ್ಯವನ್ನು ಹೋಗಲಾಡಿಸಬೇಕು.

ಬಳಿಕ ಬಟ್ಟೆ ಸುತ್ತಿದ ಕೈಯಿಂದ ಶೌಚ ಮಾಡಿಸಬೇಕು. ಸಂಪೂರ್ಣವಾಗಿ ಮಾಲಿನ್ಯದಿಂದ ಮಯ್ಯಿತ್ತನ್ನು ಶುದ್ಧೀ-ಕರಿಸಿದ ನಂತರ ಮಯ್ಯಿತ್‌ಗೆ ಸ್ನಾನ ಮಾಡಿಸುತ್ತೇನೆಂಬ ಸಂಕಲ್ಪದೊಂದಿಗೆ ಬಿಸ್ಮಿಲ್ಲಾ ಎಂದು ಹೇಳಿ ನಮಾಝಿಗೆ ವುಝು ನಿರ್ವಹಿಸುವ ರೂಪದಲ್ಲಿ ಮೃತದೇಹಕ್ಕೆ ವುಝು ಮಾಡಿಸಬೇಕು. ಆದರೆ ಬಾಯಿ ಕುಪ್ಪಳಿಸುವು-ದು ಮೂಗಿನೊಳಗೆ ನೀರು ಸೇದಿ ಶುದ್ಧೀಕರಿಸಿ ಹೊರ ಚೆಲ್ಲುವುದಕ್ಕೆ ಬದಲಾಗಿ ಬಾಯಿ ಮತ್ತು ಮೂಗಿನಲ್ಲಿ

ನೀರು ಪ್ರವೇಶಿಸದಂತೆ ಸ್ನಾನ ಮಾಡಿಸುವವನು ತನ್ನ ಕೈ ಬೆರಳಿನಿಂದ ಹಲ್ಲುಗಳನ್ನು ಮತ್ತಿತರ ಭಾಗಗಳನ್ನು ನೀರಿನಿಂದ ಸವರಬೇಕಾಗಿದೆ. ಬಳಿಕ ತಲೆ ಮತ್ತು ದಾಡಿಯನ್ನು ಸೋಪಿನ ನೀರಿನಿಂದ ತೊಳೆದು ಮೃತದೇಹದ ಬಲಭಾಗವನ್ನು ಶುಚಿಗೊಳಿಸಬೇಕು. ನಂತರ ಕತ್ತಿನ ಭಾಗ, ಬಲಗೈ, ಭುಜ, ಎದೆಯ ಭಾಗ, ದೇಹದ ಬಲ ಪಾರ್ಶ್ವ, ಬಲತೊಡೆ, ಮೊಣಕಾಲು ಮತ್ತು ಪಾದವನ್ನು ತೊಳೆಯಬೇಕು. ಬಳಿಕ ಮೃತದೇಹವನ್ನು ತಿರುಗಿಸಿ ಬೆನ್ನಿನ ಬಲಭಾಗವನ್ನು ತೊಳೆಯಬೇಕು. ನಂತರ ಇದೇ ಪ್ರಕಾರ ಎಡಭಾಗವನ್ನು ತೊಳೆದು ಶುದ್ಧಗೊಳಿಸಬೇಕು. ಸ್ನಾನ ಮಾಡಿಸಲು ಸೋಪು ಅಥವಾ ಮಾಲಿನ್ಯವನ್ನು ಶುದ್ಧೀಕರಿಸಲು ಅನುಕೂಲಕರವಾದ ಇತರ ವಸ್ತುಗಳನ್ನು ಉಪಯೋಗಿಸಬೇಕು. ಸ್ನಾನ ಮಾಡಿಸುವವನು ತನ್ನ ಕೈಗಳಿಗೆ ಬಟ್ಟೆ ಸುತ್ತಿಕೊಳ್ಳುವುದು (ಕೈಚೀಲ ಧರಿಸುವುದು) ಉತ್ತಮ.

ಒಂದು ಸಲ ಸ್ನಾನ ಮಾಡಿಸುವುದು ಕಡ್ಡಾಯವಾಗಿದೆ ಮತ್ತು ಮೂರು ಸಲ ಸ್ನಾನ ಮಾಡಿಸುವುದು ಸುನ್ನತ್ ಆಗಿದೆ. ಅವಶ್ಯವೆನಿಸಿದರೆ ಅದಕ್ಕಿಂತ ಹೆಚ್ಚು ಸಲ ಸ್ನಾನ ಮಾಡಿಸಬಹುದು. ಆದರೆ ಅದು ಬೆಸಸಂಖ್ಯೆ ಆಗಿರ-ಬೇಕು. ಕೊನೆಯ ಸಲ ಸ್ನಾನ ಮಾಡಿಸುವಾಗ ನೀರಿಗೆ ಕರ್ಪೂರವನ್ನು ಬೆರೆಸಬಹುದು. ಏಕೆಂದರೆ ಕರ್ಪೂ-ರವು ಮೃತದೇಹಕ್ಕೆ ಬಲವನ್ನು ಮತ್ತು ಪರಿಮಳವನ್ನು ನೀಡುತ್ತದೆ. ಸ್ತ್ರೀಯರ ತಲೆಗೂದಲನ್ನು ಚೆನ್ನಾಗಿ ತೊಳೆದು ಶುದ್ಧೀಕರಿಸಿದ ನಂತರ ಅದನ್ನು ಮೂರು ಭಾಗಗಳಾಗಿ ಮಾಡಿ ನೇಯ್ದು ಹಿಂದುಗಡೆಗೆ ಹಾಕಿಬಿಡಬೇಕು. ಸ್ನಾನ ಮಾಡಿಸಿದ ಮೇಲೆ ಶುದ್ಧವಾದ ವಸ್ತ್ರದಿಂದ ದೇಹವನ್ನು ಒರೆಸಬೇಕು. ಮೃತದೇಹವನ್ನು ಯಾವುದಾದರೂ ಕಾರಣದಿಂದ ಸ್ನಾನ ಮಾಡಿಸಲು ಸಾಧ್ಯವಾಗದಿದ್ದರೆ (ಕುಷ್ಟರೋಗ, ಬೆಂಕಿ ತಗುಲಿ ಬೆಂದಿದ್ದರೆ, ಮೃತಪಟ್ಟ ಸ್ತ್ರೀಯ ಪತಿ ಅಥವಾ ಇತರ ಸ್ತ್ರೀಯರು ಇಲ್ಲದಿದ್ದಲ್ಲಿ)

ದೇಹವನ್ನು ತಯಮ್ಮುಂ ಮಾಡಿಸಿದರೆ ಸಾಕು. ಶರೀರದ ಯಾವುದಾದರೂ ಭಾಗವನ್ನು ತೊಳೆಯಲು ಸಾಧ್ಯವಿ-ಲ್ಲದಿದ್ದರೆ ಆ ಭಾಗವನ್ನು ತಯಮ್ಮುಂ ಮಾಡಿಸಬಹು-ದಾಗಿದೆ. ತಯಮ್ಮುಂ ಮಾಡಿಸುವವನ ಕೈಗಳಿಗೆ ಬಟ್ಟೆ ಅಥವಾ ಇತರ ಏನಾದರೂ ಸುತ್ತಿಕೊಂಡ ನಂತರ ಮೃತ ದೇಹದ ಮುಖ ಮತ್ತು ಎರಡು ಅಂಗೈಗಳನ್ನು ಸವರುತ್ತಾ ತಯಮ್ಮುಂ ಮಾಡಿಸಬೇಕಾಗಿದೆ. ಸ್ನಾನ ಮಾಡಿಸುವ-ವನು ತದನಂತರ ಸ್ನಾನ ಮಾಡಬೇಕು. ಆದರೆ ಅದು ಕಡ್ಡಾಯವೇನೂ ಅಲ್ಲ.

ಕಫನ್ ತೊಡಿಸುವ ಕ್ರಮ

ಮೃತದೇಹವನ್ನು ಸಂಪೂರ್ಣವಾಗಿ ಮರೆಮಾಚುವ ವಸ್ತ್ರದಿಂದ ಕಫನ್ ತೊಡಿಸಬೇಕು. ವಸ್ತ್ರವು ಬಿಳಿಯೂ, ಶುದ್ಧವಾಗಿರುವುದೂ, ಹೊಸತು ಆಗಿರುವುದೂ ಉತ್ತಮ. ಹಳೆಯ ವಸ್ತ್ರದಿಂದ ಕಫನ್ ತೊಡಿಸುವುದು

ಅನುವದನೀಯವಾಗಿದೆ. ಪುರುಷರನ್ನು ಮೂರು ವಸ್ತ್ರದಿಂದ ಮತ್ತು ಸ್ತ್ರೀಯರನ್ನು ಐದು ಬಿಳಿ ವಸ್ತ್ರಗಳಲ್ಲಿ ಕಫನ್ ತೊಡಿಸುವುದು ಮೆಚ್ಚಲ್ಪಟ್ಟ ಕಾರ್ಯವಾಗಿದೆ. ಅವುಗಳಲ್ಲಿ ಒಂದನ್ನು ಒಳವಸ್ತ್ರವಾಗಿಯೂ, ಇನ್ನೊಂದನ್ನು ಖಮೀಸ್ ಆಗಿಯೂ, ಉಳಿದ ಎರಡನ್ನು ಮಯ್ಯಿತನ್ನು ಸುತ್ತಿಕಟ್ಟುವ ಹೊದಿಕೆಯಾಗಿಯೂ ಉಪಯೋಗಿಸಬೇಕು. ಸಣ್ಣ ಗಂಡು ಮಕ್ಕಳ ಮೃತದೇಹವನ್ನು ಒಂದು ಅಥವಾ ಮೂರು ವಸ್ತ್ರಗಳಿಂದ ಕಫನ್ ತೊಡಿಸುವುದು ಅನುವದನೀಯವಾಗಿದೆ. ಹೆಣ್ಣುಮಕ್ಕಳಿಗೆ ಒಂದು ಉದ್ದವಾದ ಖಮೀಸ್ ಎರಡು ಹೊದಿಕೆಗಳಿಂದ ಕಫನ್ ತೊಡಿಸುವುದಾಗಿದೆ.

ಕಫನಿನ ವಸ್ತ್ರಕ್ಕೆ ಸುಗಂಧ ದ್ರವ್ಯವನ್ನು ಹಚ್ಚುವುದು, ಪರಿಮಳವನ್ನು ಸಿಂಪಡಿಸುವುದು ಉತ್ತಮ. ಮೂರು ಕಫನ್ ಹೊದಿಕೆಗಳನ್ನು ಒಂದರ ಮೇಲೆ ಒಂದರಂತೆ ಇಟ್ಟು ಅದರ ಮೇಲೆ ಮೃತದೇಹವನ್ನು ಮಲಗಿಸಬೇ-

ಕು. ನಂತರ ಸುಗಂಧವನ್ನು ಹತ್ತಿಗೆ ಬೆರೆಸಿ ಆ ಹತ್ತಿಯನ್ನು ಮೃತದೇಹದ ಗುಹ್ಯ ಸ್ಥಾನಗಳಲ್ಲಿ, ಎರಡು ಕಣ್ಣುಗಳಲ್ಲಿ, ಮೂಗಿನಲ್ಲಿ, ಬಾಯಿಯಲ್ಲಿ, ಎರಡು ಕಿವಿಗಳಲ್ಲಿ, ಕಂಕು-ಳದಲ್ಲಿ, ಕಾಲುಗಳನ್ನು ಮತ್ತು ಕೈಗಳನ್ನು ಮಡಚುವಲ್ಲಿ ಹಾಗೂ ಹೊಕ್ಕುಳದಲ್ಲಿ ಇಡಿರಿ. ಬಳಿಕ ಮೇಲಿರುವ ಕಫನ್ ಹೊದಿಕೆಯ ಎಡಭಾಗವನ್ನು ಮೃತದೇಹದ ಬಲಭಾಗ-ಕ್ಕೆ ಮತ್ತು ಬಲಭಾಗದ ಹೊದಿಕೆಯನ್ನು ಮೃತದೇಹದ ಎಡಭಾಗಕ್ಕೆ ಸುತ್ತಿರಿ. ಆ ಪ್ರಕಾರ ಎರಡನೇ ಹೊದಿಕೆಯ-ನ್ನು ಮತ್ತು ಮೂರನೇ ಹೊದಿಕೆಯನ್ನು ಸುತ್ತಿರಿ. ಕಫನ್ ತೊಡಿಸುವ ವಸ್ತ್ರದ ಹೆಚ್ಚು ಉದ್ದನೆಯ ಭಾಗವು ತಲೆ ಭಾಗದಲ್ಲಾಗಿರತಕ್ಕದ್ದು. ತಲೆ ಭಾಗದಲ್ಲಿರುವ ಕಫನ್ ವಸ್ತ್ರದಿಂದ ಮುಖವನ್ನು ಮತ್ತು ಕಾಲ್ಭಾಗದ ವಸ್ತ್ರದಿಂದ ಕಾಲನ್ನು ಮರೆಸಿದ ನಂತರ ಕಟ್ಟಿ ಬಿಡಬೇಕು.

ಸ್ತ್ರೀಯರನ್ನು 5 ವಸ್ತ್ರಗಳಿಂದ ಕಫನ್ ತೊಡಿಸಬೇಕು. ಮೊದಲಾಗಿ ಒಳವಸ್ತ್ರವನ್ನು ತೊಡಿಸಬೇಕು. ಬಳಿಕ

ಖಮೀಸ್ ತೊಡಿಸುವುದು (ತಲೆ ಹೊದಿಕೆ) ಶಾಲು ಹೊದಿಸಿದ ನಂತರ ಎರಡು ಹೊದಿಕೆಗಳಿಂದ ಮೃತದೇಹವನ್ನು ಸುತ್ತಬೇಕು. ವಲ್ಲಾಹು ಅಅ್‌ಲಮ್. (ಸ್ವಾಲಿಹ್ ಅಲ್‌ಫೌಝಾನ್‌ರವರ ಅಹ್ಕಾಮು ತಕ್ಫೀನ್ ಎಂಬ ಲೇಖನದಿಂದ)

ಮಯ್ಯಿತ್ ನಮಾಝ್

ಮುಸಲ್ಮಾನರೊಬ್ಬರು ಮೃತರಾದರೆ ಆ ಮೃತದೇಹಕ್ಕೆ ಕಫನ್ ತೊಡಿಸುವುದು, ಅದಕ್ಕಾಗಿ ನಮಾಝ್ ನಿರ್ವಹಿಸುವುದು ಇತರ ಮುಸಲ್ಮಾನರ ಮೇಲಿನ ಸಾಮೂಹಿಕ ಬಾಧ್ಯತೆಯಾಗಿದೆ. ಈ ವಿಷಯದಲ್ಲಿ ದೊಡ್ಡವರು, ಸಣ್ಣವರು, ಸ್ತ್ರೀಯರು, ಪುರುಷರು ಎಂಬ ವ್ಯತ್ಯಾಸವಿಲ್ಲ. ಸಮೂಹದಲ್ಲಿ ಯಾರಾದರೂ ಕೆಲವರು ಆ ಬಾಧ್ಯತೆಯನ್ನು ನಿರ್ವಹಿಸಿದರೆ ಸಮೂಹವಿಡೀ ಅದನ್ನು ನೆರವೇರಿಸಿದಂತಾಗುವುದು. ಎಲ್ಲಾ ನಮಾಝಿನಂತೆ ಮಯ್ಯತ್

ನಮಾಝಿಗೂ ಶುದ್ಧತೆ, ವುಝೂ, ನಗ್ನತೆಯನ್ನು ಮರೆಸುವುದು ಕಿಬ್ಲಕ್ಕೆ ಅಭಿಮುಖವಾಗಿ ನಿಲ್ಲುವುದು, ನಿಯ್ಯತ್ ಮುಂತಾದ ಶರತ್ತುಗಳಿರುವುದು. ಪುರುಷನ ಮೃತದೇಹವಾದರೆ ನೇತೃತ್ವ ನೀಡುವ ಇಮಾಮ್ ಅದರ ಎದೆಯ ಭಾಗದ ಮುಂದೆ ಮತ್ತು ಸ್ತ್ರೀಯರ ಮೃತದೇಹವಾಗಿದ್ದರೆ ಅದರ ನಡುಭಾಗದ ಮುಂದೆ ನಿಲ್ಲತಕ್ಕದ್ದು. ಇತರರು ಇಮಾಮರ ಹಿಂದೆ ಮೂರು ಪಂಕ್ತಿ (ಅಥವಾ ಅದಕ್ಕಿಂತ ಹೆಚ್ಚು) ಗಳಾಗಿ ಮಾಡಿ ನಿಲ್ಲಬೇಕು. ಬಳಿಕ ಇಮಾಮರು ತಕ್ಬೀರ್ ಹೇಳುತ್ತಾ ಕೈಗಳನ್ನೆತ್ತಿ ಎದೆಯ ಮೇಲೆ ಇಡಬೇಕು. ನಂತರ ಅಊಝು ಹೇಳಬೇಕು. ಇಲ್ಲಿ (ಇತರ ನಮಾಝಿನಲ್ಲಿ ಹೇಳುವಂತೆ) ಪ್ರಾರಂಭದ ಪ್ರಾರ್ಥನೆ ಹೇಳಲಿಕ್ಕಿಲ್ಲ. ನೇರವಾಗಿ ಸೂರತುಲ್ ಫಾತಿಹ ಪಠಿಸಬೇಕು. ಬಳಿಕ ಎರಡನೇ ಸಲ ಕೈಗಳನ್ನೆತ್ತಿ ತಕ್ಬೀರ್ ಹೇಳುತ್ತಾ ಎದೆಯ ಮೇಲೆ ಕೈಗಳನ್ನು ಕಟ್ಟಬೇಕು. ಇದರಲ್ಲಿ ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ﷺ)

ರವರ ಮೇಲೆ ಸ್ವಲಾತ್ (ದರೂದ್ ಶರೀಫ್) ಹೇಳಬೇಕು. ನಂತರ ಮೂರನೇ ಸಲ ತಕ್ಬೀರ್ ಹೇಳುತ್ತಾ ಕೈಗಳನ್ನೆತ್ತಿ ಕಟ್ಟಿದ ನಂತರ ಮೃತರಿಗಾಗಿ ಪ್ರಾರ್ಥಿಸಿರಿ. ನಾಲ್ಕನೇ ಸಲ ತಕ್ಬೀರ್ ಹೇಳುತ್ತಾ ಕೈಗಳನ್ನೆತ್ತಿ ಕಟ್ಟಿದ ನಂತರ ಬಲಭಾಗಕ್ಕೆ ಸಲಾಂ ಹೇಳಿರಿ.

ಮಯ್ಯಿತ್‌ಗಾಗಿ ಪ್ರಾರ್ಥಿಸುವ ದುಆಗಳು

«اللَّهُمَّ اغْفِرْ لَهُ وَارْحَمْهُ، وَعَافِهِ وَاعْفُ عَنْهُ، وَأَكْرِمْ نُزُلَهُ وَوَسِّعْ مُدْخَلَهُ، وَاغْسِلْهُ بِالْمَاءِ وَالثَّلْجِ وَالْبَرَدِ، وَنَقِّهِ مِنْ الْخَطَايَا كَمَا نَقَّيْتَ الثَّوْبَ الْأَبْيَضَ مِنْ الدَّنَسِ، وَأَبْدِلْهُ دَارًا خَيْرًا مِنْ دَارِهِ، وَأَهْلًا خَيْرًا مِنْ أَهْلِهِ، وَزَوْجًا خَيْرًا مِنْ زَوْجِهِ، وَأَدْخِلْهُ الْجَنَّةَ وَأَعِذْهُ مِنْ عَذَابِ الْقَبْرِ أَوْ مِنْ عَذَابِ

النَّارِ»

“ಅಲ್ಲಾಹನೇ, ನೀನು ಇವರನ್ನು ಕ್ಷಮಿಸು. ಇವರ ಮೇಲೆ ಕರುಣೆ ತೋರು. ಇವರ ಆಗಮನವನ್ನು ಗೌರವಿಸು. ಇವರ ಪ್ರವೇಶ ಸ್ಥಳವನ್ನು ವಿಶಾಲಗೊಳಿಸು, ಮಂಜು ನೀರು ಮತ್ತು ಹಿಮಗಳಿಂದ ಬಿಳಿ ವಸ್ತ್ರವನ್ನು ಶುದ್ಧೀಕರಿಸುವಂತೆ ಇವರನ್ನು ಇವರ ಪಾಪಗಳಿಂದ ಶುದ್ಧೀಕರಿಸು. ಇವರಿಗೆ ಇವರ ಮನೆಗಿಂತ ಉತ್ತಮವಾದ ನಿವಾಸವನ್ನು ಮತ್ತು ಸಂಗಾತಿಗಿಂತ ಉತ್ತಮವಾದ ಸಂಗಾತಿಯನ್ನು ದಯಪಾಲಿಸು. ಇವರನ್ನು ಸ್ವರ್ಗದಲ್ಲಿ ಪ್ರವೇಶಗೊಳಿಸು. ಕಬರಿನ ಶಿಕ್ಷೆಯಿಂದ ಮತ್ತು ನರಕದ ಶಿಕ್ಷೆಯಿಂದ ಇವರನ್ನು ಪಾರುಮಾಡು.” (ಮುಸ್ಲಿಂ)

ಮೃತರು ಸ್ತ್ರೀಯಾಗಿದ್ದರೆ ಪ್ರಾರ್ಥನೆಯಲ್ಲಿ ಪುಲ್ಲಿಂಗ ಇರುವುದನ್ನು ಸ್ತ್ರೀಲಿಂಗವಾಗಿ ಬದಲಾಯಿಸಿಕೊಳ್ಳಬೇಕು. ಮಯ್ಯಿತ್ ನಮಾಝಿಗೆ ಯಾರಾದರೂ ತಡವಾಗಿ ಬಂದು ಜಮಾತಿನಲ್ಲಿ ಸೇರಿಕೊಂಡರೆ ಇಮಾಮ್ ಸಲಾಂ

ಹೇಳಿದ ನಂತರ ಅವನು ತನಗೆ ನಷ್ಟವಾದುದನ್ನು ಪೂರ್ತೀಕರಿಸಬೇಕು. ಮೃತದೇಹವನ್ನು ಅಲ್ಲಿಂದ ಎತ್ತಿ ಬಿಡುತ್ತಾರೆ ಎಂದರೆ, 4 ತಕ್ಬೀರ್ ಆದರೂ ಹೇಳಿ ಸಲಾಂ ಹೇಳಿರಿ. ಮಯ್ಯಿತ್ ನಮಾಝ್ ಲಭಿಸದವರು ಮೃತದೇಹವನ್ನು ಕಬರಿನ ಪಕ್ಕದಲ್ಲಿಟ್ಟು ನಮಾಝ್ ನಿರ್ವಹಿಸಬಹುದು. ಮೃತದೇಹದ (ಮಯ್ಯಿತ್) ಅನುಪಸ್ಥಿತಿಯಲ್ಲಿ ನಮಾಝ್ ನಿರ್ವಹಿಸುವ ಕುರಿತು ವಿದ್ವಾಂಸರಲ್ಲಿ ಅಭಿಪ್ರಾಯ ವ್ಯತ್ಯಾಸಗಳಿವೆ. ಈ ಕುರಿತು ವಿಷದೀಕರಣಕ್ಕೆ ಇಲ್ಲಿ ಅವಕಾಶವಿಲ್ಲ. ಮೃತದೇಹವನ್ನು ದಫನಗೊಳಿಸಿದ ನಂತರ ಮೃತರಿಗೆ ಸ್ಥೈರ್ಯ ಮತ್ತು ಕ್ಷಮೆಗಾಗಿ ದುಆ ಮಾಡಬೇಕು. ಇದಾಗಿದೆ ಪ್ರವಾದಿಗಳ ಮಾರ್ಗದರ್ಶನ. ದುಆ ಈ ರೀತಿ ಇದೆ:

«اللَّهُمَّ ثَبِّتْهُ عِنْدَ السُّؤَالِ، اللَّهُمَّ أَلْهِمْهُ الْجَوَابَ، اللَّهُمْ جَافِ الْقَبْرَ عَنْ جَنْبَيْهِ،

اللَّهُمَّ اغْفِرْ لَهُ وَارْحَمْهُ، اللَّهُمَّ آمِنْهُ مِنْ كُلِّ الْفَزَعِ»

"ಅಲ್ಲಾಹನೇ, ಪ್ರಶ್ನೆ ಕೇಳಲ್ಪಡುವ ಸಂದರ್ಭದಲ್ಲಿ ನೀನು ಇವರಿಗೆ ಸ್ಥೈರ್ಯವನ್ನು ನೀಡು. ಅಲ್ಲಾಹನೇ, ನೀನು ಇವರಿಗೆ ಉತ್ತರವನ್ನು ನೆನಪಿಸಿಕೊಂಡು, ಅಲ್ಲಾಹನೇ ಕಬರನ್ನು ಇವರಿಗೆ ವಿಶಾಲಗೊಳಿಸು. ಅಲ್ಲಾಹನೇ, ಇವರನ್ನು ಕ್ಷಮಿಸು, ಇವರ ಮೇಲೆ ಕರುಣೆ ತೋರು, ಅಲ್ಲಾಹನೇ, ಎಲ್ಲಾ ಸಂದರ್ಭಗಳಲ್ಲೂ ಇವರಿಗೆ ಸಮಾಧಾನವನ್ನು ಕರುಣಿಸು."

ನಾವು ವಾಸಿಸುತ್ತಿರುವ ಪ್ರದೇಶದಲ್ಲಿ ಕಂಡುಬರುವಂತೆ ಮೃತರ ಮನೆಯಲ್ಲಿ ಊಟ ಕೊಡುವ ಸಂಪ್ರದಾಯವು ಇಸ್ಲಾಮಿನಲ್ಲಿಲ್ಲ. ಬದಲಾಗಿ ಮರಣ ಸಂಭವಿಸಿದ ಮನೆಯವರಿಗೆ ಅಕ್ಕಪಕ್ಕದವರು ಅನ್ನಾಹಾರಗಳನ್ನು ತಯಾರಿಸಿ ಕೊಡುವುದು ಇಸ್ಲಾಮಿನ ಕ್ರಮವಾಗಿದೆ. ಜಾಫರ್ ಬಿನ್ ಅಬೀತಾಲಿಬ್(ﷺ) ನಿಧನರಾದಾಗ,

“ನೀವು ಜಾಫರ್(ﷺ) ರವರ ಮನೆಯವರಿಗೆ ಅನ್ನಾಹಾರವನ್ನು ತಯಾರಿಸಿ ಕೊಡಿ, ಏಕೆಂದರೆ ಅವರು ಬಹಳ ದೊಡ್ಡ ಆಘಾತಕ್ಕೆ ಒಳಗಾಗಿದ್ದಾರೆ” ಎಂದು ಪ್ರವಾದಿಯವರು(ﷺ) ತಮ್ಮ ಮನೆಯವರಿಗೆ ತಿಳಿಸಿದರು.

ಆದ್ದರಿಂದ ಮರಣ ಹೊಂದಿದ ಮನೆಯಲ್ಲಿ ನಡೆಸುವ 3, 7, 40 ದಿನಗಳಲ್ಲಿ ಮತ್ತು ವಾರ್ಷಿಕ ಶ್ರಾದ್ಧ ನಡೆಸುವ ಸಂಪ್ರದಾಯವು ಇಸ್ಲಾಮಿನ ಪ್ರಮಾಣಗಳಿಗೆ ಪರಿಚಯವಿಲ್ಲದ್ದಾಗಿದೆ. ಪ್ರವಾದಿ(ﷺ) ರವರ ಕಾಲದಲ್ಲೇ ನಿಧನರಾದ ಅವರ ನಿಕಟ ಸಂಬಂಧಿಕರ ಕುರಿತು ಈ ತರಹದ ಆಚಾರಗಳನ್ನು ಪ್ರವಾದಿಯವರು(ﷺ) ನಡೆಸಿದ್ದಾಗಿ ಕಂಡುಬರುವುದಿಲ್ಲ. ಅದೇ ಪ್ರಕಾರ ಪ್ರವಾದಿಯವರು(ﷺ) ನಿಧನರಾದ ನಂತರ ಅವರನ್ನು ತಮ್ಮ ಜೀವ ಮತ್ತು ಸರ್ವಸ್ವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಸ್ವಹಾಬಿಗಳು ಯಾರೂ ಈ ರೀತಿಯ ಪ್ರವರ್ತನೆಗಳಲ್ಲಿ ಏರ್ಪಟ್ಟಿದ್ದರೆನ್ನಲು ಸಾಧ್ಯವಿಲ್ಲ. ಏಕೆಂದರೆ ಇಸ್ಲಾಮಿನ ಅಧಿಕೃತ

ಪ್ರಮಾಣಗಳಲ್ಲಿ ಒಂದೇ ಒಂದು ಸಣ್ಣ ಆಧಾರವನ್ನು ತೋರಿಸಿಕೊಡಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಮರಣ ಹೊಂದಿದವರಿಗಾಗಿ ಪ್ರಾರ್ಥಿಸುವುದು ಅಷ್ಟೇ ನಮ್ಮ ಬಾಧ್ಯತೆಯಾಗಿದೆ. ಅವರ ಹೆಸರಲ್ಲಿ ಗೌಪ್ಯವಾಗಿ ದಾನಧರ್ಮಗಳನ್ನು ನೀಡಬಹುದಾಗಿದೆ. (ವಲ್ಲಾಹು ಅಅ್‌ಲಮ್) ಧರ್ಮದಲ್ಲಿರದ ಕಾರ್ಯಗಳಿಗೆ (ಬಿದ್‌ಅತ್) ಮಹತ್ವವನ್ನು ಕಲ್ಪಿಸಿಕೊಂಡು ಪ್ರವರ್ತಿಸುವುದು ಅಲ್ಲಾಹನ ಶಿಕ್ಷೆಗೆ ಕಾರಣವಾಗುವ ಕಾರ್ಯವಾಗಿರುವುದರಿಂದ ಅದರ ಕುರಿತು ಎಚ್ಚರ ವಹಿಸುವುದು ಒಳ್ಳೆಯದು.

ಕಬರ್ ಝಿಯಾರತ್ (ಸಂದರ್ಶನ) ಇಸ್ಲಾಮಿನಲ್ಲಿ ಸುನ್ನತ್ ಆಗಿ ಕಲ್ಪಿಸಲಾಗಿರುವ ಒಂದು ಸತ್ಕಾರ್ಯವಾಗಿದೆ. ಇಂದಲ್ಲದಿದ್ದರೆ ನಾಳೆ ನೀನು ಕೂಡ ಈ ಕತ್ತಲ ಕೂಪವಾಗಿರುವ ಗೂಡಿನೊಳಗೆ ಸೇರಲೇಬೇಕು ಎನ್ನುವ ಭಾವನೆ ಉಂಟುಮಾಡುವ ಉದ್ದೇಶದಿಂದ ಆಗಿದೆ ಇಸ್ಲಾಂ

ಇದನ್ನು ಅನುಮತಿಸಿರುವುದು. ಕಬರಸ್ಥಾನದಲ್ಲಿ ಹೋಗಿ ಅವರಿಗೆ ಸಲಾಂ ಹೇಳಬೇಕೆಂದೂ, ಅವರಿಗಾಗಿ ಪ್ರಾರ್ಥಿಸಬೇಕೆಂದೂ ಇಸ್ಲಾಂ ಸೂಚಿಸುತ್ತದೆ. ಅಲ್ಲಿ ನಿಂತು ಕುರ್‌ಆನ್ ಪಠಿಸುವುದು, ನಮಾಝ್ ನಿರ್ವಹಿಸುವುದು, ಬಿಡಾರ ಹೂಡುವುದು ಸಲ್ಲದು. ಈ ವಿಷಯದಲ್ಲಿ ಅರಿವು ಸಂಪಾದಿಸಲು ನಾವು ಗರಿಷ್ಠ ಸಾಧ್ಯ ಪ್ರಯತ್ನ ನಡೆಸಬೇಕಾಗಿದೆ. ಅಲ್ಲಾಹನು ಅವನ ಕರುಣೆ, ಕ್ಷಮೆ ಮತ್ತು ಔದಾರ್ಯಪೂರ್ಣ ನೋಟವನ್ನು ನಮ್ಮ ಮೇಲೆ ಸ್ಥಿರಗೊಳಿಸಲಿ. ಆಮೀನ್.

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore